ತಾರೀಖು 21ನೆ ಆಗಸ್ಟ್ 1903.

ನಂ. ರೆ. 583—ರೆ. ಫೈ. 4-1903, ಮೈಸೂರ ಸರ್ವಿಸ್ ರೆಗ್ಯುಲೇಷ್ಗಳ 165 ಎ. ನೆ ಆರ್ಟಿಕಲ್ ಅನುಸರಿಸಿ ಮೈಸೂರ್ ರೆವಿನ್ಯೂ ಸರ್ವೆಯ ಸ್ಪೆಷಿಯಲ್ ಅಸಿಸ್ಟೆಂಟ್ ಸೂಪರಿಟೆಂಡೆಂಟರಾದ ಮೆ॥ ಕೆ. ರಾಘವೇಂದ್ರಯ್ಯಂಗಾರ್ರಿಗೆ 1903ನೆ ಆಗಸ್ಟ್ ಗುರ್ರೆ ಲಾಗಾಯತು ಯೂ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಸದರೀ ರೆಗ್ಯುಲೇಷ್ಗಳ 188 ವ 220ನೆ ಆರ್ಟಿಕಲ್ ಗಳನುಸಾರವಾಗಿ 6 ತಿಂಗಳುಗಳ ಫರ್ಲೋದೊಂದಿಗೆ ಸೇರಿದ 3 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 24ನೆ ಆಗಸ್ಟ್ 1903.

ನಂ. ಫೈ. 578—ರೆ. ಫೈ. 142-96-97, ಮೈಸೂರು ಸರ್ವಿಸ್ ರೆಗ್ಯುಲೇಷ್ಗಳ 188ನೆ ಆರ್ಟಿಕಲ್ ಅನುಸರಿಸಿ, ಮೈಸೂರು ಗವರ್ಮೆಂಟಿನ ಕಂಟ್ರೋಲರವರ ಚೇಫ್ ಅಸಿಸ್ಟೆಂಟ್ರಾದ ಮೆ॥ ಟಿ. ವೈಯ್ಯಾಪುರಿ ಶೆಟ್ಟಿಯವರಿಗೆ 1903ನೆ ಜುಲೈ 31ನೆ ತಾರೀಖಿನ ಲಾಗಾಯತು 8 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 24ನೆ ಆಗಸ್ಟ್ 1903.

ನಂ. ರೆ. 591, ಡೆಪ್ಯುಟಿ ಕಮಿಷನರಾದ ಮೆ॥ ಕೆ. ಪಿ. ಪುಟ್ಟಣ್ಣ ಚೆಟ್ಟಿಯವರು ಶಿವಮೊಗ್ಗ ಡಿಸ್ಟ್ರಿಕ್ಟ್ ವ ಟ್ರೆಜರಿಯ ಚಾರ್ಜನ್ನು ಅಸಿಸ್ಟೆಂಟ್ ಕಮಿಷನರಾದ ಮೆ॥ ಸಿ. ಎಸ್. ಬಾಲಸುಂದರಂ ಅಯ್ಯರ್ ಯವರಿಗೆ 1903ನೆ ಇಸವಿ ಆಗಸ್ಟ್ 11ನೆ ತಾರೀಖಿನ ಮಧ್ಯಾಹ್ನಾತ್ಪರ ಒಪ್ಪಿಸಿರುತ್ತಾರೆ.

ತಾರೀಖು 24ನೆ ಆಗಸ್ಟ್ 1903.

ನಂ. ರೆ. 619—ರೆ. ಫೈ. 24-98, ಮೈಸೂರು ಸರ್ವಿಸ್ ರೆಗ್ಯುಲೇಷ್ಗಳ 188ನೆ ಆರ್ಟಿಕಲ್ ಅನುಸರಿಸಿ, ಗುಂಡ್ಲುಪೇಟೆ ತಾಲ್ಲೂಕಿನ ಅಮಲ್ದಾರ್ರಾದ ಮೆ॥ ಎಸ್. ಗೋಪಾಲಕೃಷ್ಣಯ್ಯಂಗಾರ್ರಿಗೆ 1903ನೆ ಏಪ್ರಿಲ್ 19ನೆ ತಾರೀಖಿನ ಲಾಗಾಯತು 6 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 24ನೆ ಆಗಸ್ಟ್ 1903.

ನಂ. ರೆ. 628—ರೆ. ಫೈ. 1—03, ಮೈಸೂರ ಸರ್ವಿಸ್ ರೆಗ್ಯುಲೇಷ್ಗಳ 188ನೆ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟ್ ದಾವಣಗೆರೆ ತಾಲ್ಲೂಕಿನ ಅಮಲ್ದಾರ್ರಾದ ಮೆ॥ ಸಿ. ಕೃಷ್ಣರಾಯರಿಗೆ 1903ನೆ ಜುಲೈ 4ನೆ ತಾರೀಖಿನಾರಭ್ಯ 3 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

(2) ಹೊಳಲಕೆರೆಯ ಆಕ್ಟಿಂಗ್ ಅಮಲ್ದಾರ್ರಾದ ಮೆ॥ ನರಸಿಂಗಭಟ್ಟರ್ಯವರು ಹಂಗಾಮಿ ತರೀಕು ವರ್ಗ ಮಾಡಲ್ಪಟ್ಟು, ಮೇಲ್ತುಂಡ ಅಮಲ್ದಾರ್ರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ದಾವಣಗೆರೆ ತಾಲ್ಲೂಕಿನ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕು ಮೊಕರರ್ರಾಡಲ್ಪಟ್ಟಿರುತ್ತಾರೆ.

(3) ತಾಲ್ಲೂಕು ಷಿರಿಸ್ತೆದಾರ್ರಾದ ರಾಮರಾಯರು, ಮೆ॥ ನರಸಿಂಗಭಟ್ಟರ್ಯವರು ಇತರ ಕೆಲಸದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಹಂಗಾಮಿಯಾಗಿ ಹೊಳಲಕೆರೆ ತಾಲ್ಲೂಕಿನ ಚಾರ್ಜ್ನಲ್ಲಿರತಕ್ಕದ್ದು.

ಹುಕುಂ ಬಯೋಜೇಬ್,
ಹೆಚ್. ವಿ. ನಂಜುಂಡೈಯ್ಯ,
ಜನರಲ್ ಮ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಸೆಕ್ರಿಟೆರಿ.

ಮಿಲಿಟೆರಿ.

ಅಪಾಯಿಂಟ್‌ಮೆಂಟ್ಸ್.

ತಾರೀಖು 20ನೆ ಆಗಸ್ಟ್ 1903.

ನಂ. 536—7, ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ಜಮೇದಾರಾಗಿ ಲಕ್ಷ್ಮಣರಾಯರ ಮೊಕರರಾತಿಯನ್ನು ಅವರು ಕೆಲಸಕ್ಕೆ ದಾಖಲಾಗುವ ತಾರೀಖಿನಾರಭ್ಯ ಮೈಸೂರು ಸೀಮೆಯ ಘನವನ್ನೆತ್ತಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಮಂಜೂರ್ಮಾಡಿರುತ್ತಾರೆ.

ಹುಕುಂ ಬಯೋಜೇಬ್,
ಹೆಚ್. ಡಾಡ್,
ಮಿಲಿಟೆರಿ ಇಲಾಖೆಯ ಅಸಿಸ್ಟೆಂಟ್ ಸೆಕ್ರಿಟೆರಿ.